ಬಾವಿ, ಕೊಳವೆ ಬಾವಿ ಬಳಸಿ ವಿದ್ಯುತ್ ಮೂಲಕ ನೀರೆತ್ತುತ್ತ ಮೇಲ್ಮೈ ನೀರಿನ ಮೂಲವಾದ ಕೆರೆ ನಿರ್ಲಕ್ಷ್ಯ ಹೆಚ್ಚಿದೆ. ಕಸ ಚೆಲ್ಲುವ ತಾಣವಾಗಿ, ಅತಿಕ್ರಮಣದ ನೆಲೆಯಾಗಿ, ಕಳೆ ಕಾಡಾಗಿ ಕೆರೆ ಕಳೆಯುವ ಆಟ ಎಲ್ಲೆಡೆಯೂ ನಡೆದಿದೆ. ತುಮಕೂರಿನ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಕೆರೆ ಕಳೆದು ಹೋಗಿದೆಯೆಂದು ಸ್ಥಳೀಯರು ದೂರು ನೀಡಿದ್ದು ನೆನಪಿರಬಹುದು. ಎಲ್ಲೆಡೆ ಹೀಗೆ ಆಗಿದೆ. ಸಣ್ಣ ಕೆರೆಗಳ ಮಹತ್ವ ಅರಿಯಲೆಂದು ಕೆರೆ ಪುನಶ್ಚೇತನ ಕಾರ್ಯ ನೋಡಲು ಹೋಗಿದ್ದೆ. ‘ಎರಡೇ ಎರಡು ತಿಂಗಳ ಸಮಯದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಎಂಟ್ಹತ್ತು ಕೆರೆಗಳ ಅಭಿವೃದ್ಧಿ ಮಾಡಿದ್ದೇವೆ. ಜನರ ಆಸಕ್ತಿ, ಭಾಗವಹಿಸುವಿಕೆ ವಿಶೇಷವಾಗಿದೆ. ಇನ್ನೇನು ಮುಂದಿನ ಬೇಸಿಗೆಗೆ ನೀರಿನ ಲಾಭ ಊರಿಗೆಲ್ಲ ತಿಳಿಯುತ್ತದೆ’ ಎಂದು ಧರ್ಮಸ್ಥಳ ಸಂಸ್ಥೆಯ ಶಿವಮೊಗ್ಗದ ಕೆರೆ ಅಭಿಯಂತರ ದಂಡೆಯಲ್ಲಿ ಓಡಾಡುತ್ತ ಕೆರೆ ತೋರಿಸಿದರು.

ಪಿಳ್ಳಂಗೆರೆ, ಮಾವಿನಕೆರೆ, ಯಡೇಹಳ್ಳಿಕೆರೆ, ತತ್ತೂರು ಗ್ರಾಮ ತೋಟದ ಕೆರೆ, ಬೆಳ್ಳಂದೂರು ಗ್ರಾಮದ ಅಂಗಳಕೆರೆ, ಪುರ ಸೋಮೇಶ್ವರ ಕೆರೆಗಳು ಶಿವಮೊಗ್ಗ ಜಿಲ್ಲೆಯಲ್ಲಿ ನೀರು ಹಿಡಿಯಲು ಸಜ್ಜುಗೊಂಡಿದ್ದವು. ಶಿಕಾರಿಪುರದ ಬಸವ ನಂದಿಹಳ್ಳಿ ಗ್ರಾಮದ 26 ಎಕರೆ ಕ್ಷೇತ್ರದ ಬಸವಣ್ಣನಕೆರೆ ಹೂಳೆತ್ತಲಾಗಿತ್ತು. ಪರಿಣಾಮ ಇಂದು ಮಹಾ ಜಲಪಾತ್ರೆಯಾಗಿದೆ. ಬಸವನಂದಿಹಳ್ಳಿಯ ರಾಜಣ್ಣ ಸೇರಿದಂತೆ ಕೆಲವು ಕೃಷಿಕರ ಕೊಳವೆ ಬಾವಿಗಳಲ್ಲಿ ನೀರು ಉಕ್ಕುತ್ತಿದೆ! ಇದೇ ಜಿಲ್ಲೆಯ ತಾಳಗುಂದದಲ್ಲಿ ಕದಂಬರ ಕಾಲದ ರಾಜ್ಯದ ಎರಡನೇ ಪುರಾತನ ಕೆರೆಯಿದೆ. ಸಾವಿರಾರು ಕೆರೆಗಳ ಇಲ್ಲಿನ ಸೊರಬ ತಾಲೂಕು ಏಷ್ಯಾ ಖಂಡದಲ್ಲಿಯೇ ಅತಿ ಹೆಚ್ಚು ಕೆರೆಗಳಿರುವ ಪ್ರದೇಶವಾಗಿದೆ! ಮಳೆ ನೀರು ಹಿಡಿದು ಅಂತರ್ಜಲ ಸಂರಕ್ಷಿಸುತ್ತಿದ್ದ ಕೆರೆ ಮರೆತಿದ್ದಕ್ಕೆ ಇಲ್ಲೆಲ್ಲ ಅಂತರ್ಜಲ ಕುಸಿದಿದೆ. ನಾವು ಕಳೆದುಕೊಂಡಿದ್ದನ್ನು ಕಳೆದ ಜಾಗದಲ್ಲಿ ಹುಡುಕುವಂತೆ ಕೆರೆಗೆ ಮರುಜೀವ ಕೊಡುವುದು ಮುಖ್ಯವೆನಿಸಿದೆ.

ಆರೋಗ್ಯ, ಸ್ವಚ್ಛತೆ, ಶಿಕ್ಷಣ, ಕೃಷಿ, ಹೈನುಗಾರಿಕೆ, ಸ್ವಯಂ ಉದ್ಯೋಗ, ಸ್ವಸಹಾಯ ಸಂಘ, ಪ್ರಗತಿಬಂಧು ಸಂಘವೆಂದು ಹಳ್ಳಿ ಅಭ್ಯುದಯದ ಹತ್ತು ಹಲವು ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಧರ್ಮಸ್ಥಳ ಸಂಸ್ಥೆಯ ಕೆರೆ ಕಾಯಕದ ಹೊಸ ಹೆಜ್ಜೆ ಹಳ್ಳಿಗರಿಗೆ ಸಂತಸ ನೀಡಿದೆ.

ಇಡೀ ರಾಜ್ಯಕ್ಕೆ ಕೆರೆ ಪುನಶ್ಚೇತನ ಕಾರ್ಯಕ್ರಮಗಳು ವಿಸ್ತರಣೆಗೊಂಡಿವೆ. ಮಳೆ, ಮಣ್ಣು, ಕೃಷಿಯ ರಾಜ್ಯದ ವಿಭಿನ್ನ ನೆಲೆಗಳಲ್ಲಿ ಕೈಗೊಂಡ ಯೋಜನೆಗಳು ಕಾಯಕದ ಅಪಾರ ಅನುಭವ, ಯಶಸ್ಸು ನೀಡಿದೆ. ಸಾಮಾನ್ಯವಾಗಿ ಒಂದು ಕೆರೆಯ ಹೂಳು ತೆಗೆದ ಬಳಿಕ ಎಷ್ಟು ಹಣ ಖರ್ಚಾಯಿತು? ಎಷ್ಟು ಕ್ಯುಬಿಕ್ ಮೀಟರ್ ಹೂಳು ತೆಗೆದರು? ಮಾಹಿತಿಗೆ ಸೀಮಿತವಾಗಿರುತ್ತದೆ. ಆದರೆ ಇಲ್ಲಿ ಹಾಗಲ್ಲ: ಕೆರೆ ಆರಂಭದಿಂದ ಮುಕ್ತಾಯದ ವಿವರಗಳ ಜೊತೆಗೆ ಹಳ್ಳಿ, ಕೃಷಿ ಪರಿಸರ ಸಮಗ್ರ ಚಿತ್ರಾನುಭವಗಳ ಸಹಿತ ಬದಲಾವಣೆಗಳ ಸೊಗಸಾದ ದಾಖಲಾತಿಯಿದೆ. ಗ್ರಾಮಗಳ ಕೆರೆ ಮಹತ್ವ, ಚರಿತ್ರೆಗೆ ಇದು ಅತ್ಯಂತ ಮುಖ್ಯ.

## ಕೆರೆ ಹಿಂದಿನ ಜಲಜೀವನ ಧರ್ಮ

ಮಳೆ ಕೊರತೆಯ ಹೈದ್ರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ; ಅಂತರ್ಜಲ ಪಾತಾಳಕ್ಕೆ ಕುಸಿದ ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ ಸೇರಿದಂತೆ ಈವರೆಗೆ 298 ಕೆರೆಗಳ ಹೂಳು ತೆಗೆದು ಅಭಿವೃದ್ಧಿಗೊಳಿಸಲಾಗಿದೆ. 25–30 ಎಕರೆ ವಿಸ್ತೀರ್ಣದ ಕೆರೆಗಳಿಂದ ಆರಂಭಿಸಿ ಐದಾರು ಎಕರೆಯ ಕೆರೆಗಳಿವೆ. ಸ್ವತಃ ಧರ್ಮಸ್ಥಳ ಸಂಸ್ಥೆ ತನ್ನ ಸ್ವಂತ ಅನುದಾನವಾಗಿ 23.72 ಕೋಟಿ ರೂಪಾಯಿಗಳನ್ನು ಕೆರೆಗಳಿಗೆ ವಿನಿಯೋಗಿಸಿದೆ. ಊರಿಗೆ ಉಪಯುಕ್ತವಾದ ಸಂಸ್ಥೆಯ ಜಲ ಕಾರ್ಯಕ್ಕೆ ವ್ಯಕ್ತಿಗಳು, ಇನ್ನಿತರ ಸಂಸ್ಥೆಗಳು ಹೂಳೆತ್ತಿದ ಮಣ್ಣು ಸಾಗಾಟ ವೆಚ್ಚಭರಿಸಲು ಕೈಜೋಡಿಸಿ 17 ಕೋಟಿ ಕೊಡುಗೆ ನೀಡಿದ್ದಾರೆ. ನಮ್ಮೂರ ನಮ್ಮ ಕೆರೆಯ ನಿಜ ಯಶಸ್ಸು ಇದು. 2016ರ ಮೊದಲ ಪ್ರಾಯೋಗಿಕ ವರ್ಷದಲ್ಲಿ ಧಾರವಾಡ, ಕಲಬುರ್ಗಿ ಜಿಲ್ಲೆಗಳ 8 ಕೆರೆಗಳ ಹೂಳು ತೆಗೆಯಲಾಗಿತ್ತು. ಜನರಿಂದ ದೊರೆತ ಉತ್ತಮ ಸ್ಪಂದನ ಇಡೀ ರಾಜ್ಯವ್ಯಾಪಿಸಿದೆ. ಇದನ್ನು ಗಮನಿಸಿಯೇ 2019ರಲ್ಲಿ ಕರ್ನಾಟಕ ಸರ್ಕಾರ ‘ಧರ್ಮಸ್ಥಳ ಸಂಸ್ಥೆ’ಯ ಸಹಭಾಗಿತ್ವದಲ್ಲಿ ‘ಕೆರೆ ಸಂಜೀವಿನಿ’ ಯೋಜನೆ ಆರಂಭಿಸಿತು, ಇದರಿಂದ 65 ಕೆರೆಗಳ ಪುನಶ್ಚೇತನವಾಯಿತು.

ಪುನರುಜ್ಜೀವನಗೊಂಡ ಕೆರೆ ನೋಡುತ್ತಾ ಹೋದರೆ ಅಚ್ಚುಕಟ್ಟಿನ ನೆಲದ ಜೀವಸೆಲೆ ಮಾತಾಡುತ್ತದೆ. ಬಾನಿಗೆ ತೆರೆದು ನಿಂತ ಕೆರೆ ಪುಟ್ಟ ತೆರೆದ ಬಾವಿಗಿಂತ ಭಿನ್ನ. ಇಲ್ಲಿ ಭಾಷೆ, ಜಾತಿ, ಮೇಲು–ಕೀಳೆಂಬ ಕಲ್ಪನೆಗೆ ಮೀರಿದ

